ಸಾಕ್ಷಿಯನ್ನು 17.11.2022 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. **ಪಿ.ಡಬ್ಲ್ಯೂ-1**

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಪರ ವಕೀಲರಿಂದಃ

1. ದಾವಾ ಆಸ್ತಿಯ ಪೂರ್ವಕ್ಕೆ ಲಾಯರ್ ಈರಪ್ಪನವರ ನಿವೇಶನ ಎಂದು ನಾನು ವಾದಪತ್ರದಲ್ಲಿ ನಮೂದು ಮಾಡಿದ್ದು ಸದರಿ ಲಾಯರ್ ಈರಪ್ಪನವರು ಆ ನಿವೇಶನವನ್ನು ಈಗಾಗಲೆ ಸುಮಾರು 15 ವರ್ಷಗಳ ಹಿಂದೆ ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಮಾರಾಟ ಮಾಡಿರಬಹುದು ಎಂದು ನುಡಿದಿದ್ದಾರೆ. ಹಾಗಾಗಿ ದಾವಾ ಎ ಷೆಡ್ಯೂಲ್ ಆಸ್ತಿಯ ಪೂರ್ವಕ್ಕೆ ಪ್ರಸ್ತುತ ಲಾಯರ್ ಈರಪ್ಪನವರು ಇಲ್ಲ ಆದರೆ ಕ್ರಯಕ್ಕೆ ಪಡೆದುಕೊಂಡಿರುವ ಬೇರೆ ವ್ಯಕ್ತಿಗಳು ಇದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ದಾವಾ ಆಸ್ತಿ ಎ ಷೆಡ್ಯೂಲ್ ನ ಪೂರ್ವಕ್ಕೆ ಇರುವ ಕ್ರಯದಾರರ ಹೆಸರು ನನಗೆ ಗೊತ್ತಿದ್ದರು ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಲಾಯರ್ ಈರಪ್ಪನವರಿಗೆ ದಾವಾ ಷೆಡ್ಯೂಲ್ ಎ ಆಸ್ತಿಯ ಪೂರ್ವಕ್ಕೆ ಇರುವ ನಿವೇಶನವನ್ನು ಮಾರಾಟ ಮಾಡಿದ್ದರು ಎಂದರೆ ಪ್ರತಿವಾದಿಗಳು ದಾವಾ ಷೆಡ್ಯೂಲ್ ಎ ಆಸ್ತಿಗೆ ದಾರಿಯನ್ನು ಬಿಡದೆ ಮಾರಾಟ ಮಾಡಿದ್ದರು ಎಂದು ನುಡಿದಿದ್ದಾರೆ. ಲಾಯರ್ ಈರಪ್ಪನವರಿಗೆ ಕ್ರಯಕ್ಕೆ ಕೊಟ್ಟಂತಹ ಸ್ವತ್ತಿನ ದಕ್ಷಿಣದ ಕಡೆ 18 ಅಡಿ ರಸ್ತೆಯನ್ನು ಬಿಡಲಾಗಿದೆ ಎಂದು ಅವರ ಕ್ರಯಪತ್ರದಲ್ಲಿ ನಮೂದಾಗಿದ್ದು ಈಗಲು ಕೂಡ ಸದರಿ ನಿವೇಶನದ ದಕ್ಷಿಣದ ಕಡೆ 18 ಅಡಿ ರಸ್ತೆ ಇದೆ ಎಂದರೆ ಸಾಕ್ಷಿ ಯಾವುದೇ ರಸ್ತೆ ಇಲ್ಲ ಆದರೆ ಅಲ್ಲಿ ಕಲ್ಲು ನೆಟ್ಟುಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ಕಲ್ಲುಗಳನ್ನು ಯಾರು ನೆಟ್ಟಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಕಲ್ಲುಗಳನ್ನು ನೆಟ್ಟಿರುವವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇದೆ. ಪ್ರತಿವಾದಿಗಳು ನನಗೆ ದಿಃ 06.09.1999 ರಂದು ಮಾಡಿಕೊಟ್ಟಿರುವ ಕ್ರಯಪತ್ರದಲ್ಲಿ ಆಸ್ತಿಯ ದಕ್ಷಿಣದ ಕಡೆ 18 ಅಡಿ ರಸ್ತೆ ಇದೆ ಎಂದು ನಮೂದು ಮಾಡಿದ್ದು ಅದೇ ರೀತಿ ಅಲ್ಲಿ ರಸ್ತೆ ಇದೆ ಎಂದರೆ ಸಾಕ್ಷಿ ಕ್ರಯಪತ್ರದಲ್ಲಿ 18 ಅಡಿ ರಸ್ತೆಯನ್ನು ಬಿಡಲಾಗಿದೆ ಎಂದು ಬರೆದುಕೊಟ್ಟಾಗ ರಸ್ತೆ ಇತ್ತು ಆದರೆ ಈಗ 3 ನೇ ಪ್ರತಿವಾದಿ ಸದರಿ ರಸ್ತೆಗೆ ಕಲ್ಲುಗಳನ್ನು ನೆಟ್ಟಿರುತ್ತಾರೆ ಎಂದು ನುಡಿದಿದ್ದಾರೆ. 3 ನೇ ಪ್ರತಿವಾದಿ ದಾವಾ ಎ ಷೆಡ್ಯೂಲ್ ಆಸ್ತಿಯ ಉತ್ತರಕ್ಕೆ ಇರುವ ನಿವೇಶನವನ್ನು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. 3 ನೇ ಪ್ರತಿವಾದಿ ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಯವರಿಂದ ಕೊಂಡುಕೊಂಡಿರುತ್ತಾರೆ. ಆ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

3 ನೇ ಪ್ರತಿವಾದಿ ಕ್ರಯಕ್ಕೆ ಪಡೆದುಕೊಂಡಿರುವ ದಾಖಲೆ ನನಗೆ ಗೊತ್ತಿಲ್ಲ ಹಾಗಾಗಿ ಅದನ್ನು ಹಾಜರುಪಡಿಸಲಾಗುವುದಿಲ್ಲ. ನಾನು ಮಳವಳ್ಳಿ ಪುರಸಭಾ ಕಾರ್ಯಾಲಯಕ್ಕೆ ಮನೆ ಕಟ್ಟುವ ಸಲುವಾಗಿ ಅನುಮತಿ ಕೇಳಿ ಅರ್ಜಿ ಕೊಟ್ಟ ಬಗ್ಗೆ ಸದರಿ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಮಳವಳ್ಳಿ ಪುರಸಭಾ ಕಾರ್ಯಾಲಯದವರು ಸ್ಥಳ ಪರಿಶೀಲಿಸಿ ದಕ್ಷಿಣ ದಿಕ್ಕಿನಲ್ಲಿರುವ ರಸ್ತೆಯನ್ನು ಸರಿಯಾಗಿ ತೋರಿಸಿಕೊಂಡು ಬನ್ನಿ ಎಂದು ತಿಳಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಿಃ 06.09.1999 ರಲ್ಲಿ ನನಗೆ ಬರೆದುಕೊಟ್ಟಿರುವ ಕ್ರಯಪತ್ರದಲ್ಲಿ ತೋರಿಸಿರುವಂತೆ ನಿವೇಶನದ ದಕ್ಷಿಣ ದಿಕ್ಕಿಗೆ 18 ಅಡಿ ರಸ್ತೆಯನ್ನು ನಿಪಿ 1 ರ ಪ್ರಕಾರ ಬಿಟ್ಟುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಪ್ರತಿವಾದಿಗಳು ಸದರಿ ರಸ್ತೆಯನ್ನು ಸೇರಿಸಿ ಮಾರಾಟ ಮಾಡಿರುತ್ತಾರೆ ಎಂದು ನುಡಿದಿದ್ದಾರೆ. ನಿಪಿ 1 ರಂತೆ ಪ್ರತಿವಾದಿಗಳು ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ರಸ್ತೆಯನ್ನು ಬಿಟ್ಟುಕೊಟ್ಟಿರುವುದರಿಂದಲೆ ಮಳವಳ್ಳಿ ಪುರಸಭೆ ಕಾರ್ಯಾಲಯವು ನನ್ನ ಹೆಸರಿಗೆ ಇ ಸ್ವತ್ತು ಖಾತೆಯನ್ನು ಮಾಡಿರುತ್ತದೆ ಎಂದರೆ ಸಾಕ್ಷಿ ನನ್ನ ಹೆಸರಿಗೆ ಖಾತೆ ಮಾಡುವ ಸಂದರ್ಭದಲ್ಲಿ ದಾವಾ ಎ ಷೆಡ್ಯೂಲ್ ಆಸ್ತಿಯನ್ನು ಸ್ಥ,ಳ ಪರಿಶೀಲನೆ ಮಾಡಿದಾಗ ಅಲ್ಲಿ 18 ಅಡಿ ರಸ್ತೆ ಇತ್ತು ಆದ್ದರಿಂದ ಇ ಸ್ವತ್ತನ್ನು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ನನಗೆ ರಸ್ತೆಯನ್ನು ಬಿಟ್ಟುಕೊಟ್ಟ ಮೇಲೆ ನನ್ನ ಅಜಾಗರೂಕತೆಯಿಂದ 3 ನೇ ವ್ಯಕ್ತಿಗಳು ಸದರಿ ರಸ್ತೆಯನ್ನು ಆಕ್ರಮಿಸಿಕೊಂಡಿದ್ದಾರೆ ಎಂದರೆ ಪ್ರತಿವಾದಿಗಳೆ ಸದರಿ ರಸ್ತೆಯನ್ನು ಸೇರಿಸಿ ಮಾರಾಟ ಮಾಡಿದ್ದಾರೆ ಎಂದು ಸಾಕ್ಷಿ ನುಡಿದಿದ್ದಾರೆ. ಪ್ರತಿವಾದಿಗಳು ರಸ್ತೆಯನ್ನು ಸೇರಿಸಿ ಮಾರಾಟ ಮಾಡಿದ್ದಾರೆ ಎಂದು ಹೇಳುವ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಯಾಕೆ ಅವರನ್ನು ಪಕ್ಷಗಾರರನ್ನಾಗಿ ಮಾಡಬೇಕು ಎಂದು ನುಡಿದಿದ್ದಾರೆ. ದಾವಾ ಎ ಷೆಡ್ಯೂಲ್ ಆ ಸ್ತಿಯ ದಕ್ಷಿಣ ಕಡೆ ಬಿಟ್ಟುಕೊಟ್ಟಿರುವ ರಸ್ತೆಯನ್ನು ಪ್ರತಿವಾದಿಗಳು ಬೇರೆ ಯಾರಿಗೂ ಮಾರಾಟ ಮಾಡಿಲ್ಲ ಎಂದು ನುಡಿದಿರುತ್ತಾರೆ. ಆ ರೀತಿ ಮಾರಾಟ ಮಾಡಿದ್ದೆ ಆದಲ್ಲಿ ನಾನು ಅವರನ್ನು ಪಕ್ಷಗಾರರನ್ನಾಗಿ ಮಾಡುತ್ತಿದ್ದೆ ಎಂದರೆ ಸಾಕ್ಷಿ ಅವರನ್ನು ಪಕ್ಷಗಾರರನ್ನಾಗಿ ಮಾಡಲು ಅವಶ್ಯಕತೆ ಇಲ್ಲ ಎಂದು ನುಡಿದಿದ್ದಾರೆ. ಪ್ರತಿವಾದಿಗಳು ನನಗೆ ನಿಪಿ 1 ರಂತೆ ಬರೆದುಕೊಟ್ಟಿರುವ ಕ್ರಯಪತ್ರದಂತೆ ದಕ್ಷಿಣ ದಿಕ್ಕಿಗೆ 18 ಅಡಿ ರಸ್ತೆಯನ್ನು ಬಿಟ್ಟುಕೊಂಟ್ಟಿದ್ದರು ಕೂಡ

ನನ್ನ ತಪ್ಪಿನಿಂದ ಸದರಿ ರಸ್ತೆಯನ್ನು ಬೇರೆಯವರು ಆಕ್ರಮಿಸಿಕೊಂಡಿರಬಹುದು ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುವ 18 ಅಡಿ ರಸ್ತೆಯನ್ನು ಗುರುತಿಸಿಕೊಡುವ ಬಗ್ಗೆ ಪ್ರತಿವಾದಿಗಳಿಗೆ ಯಾವುದೇ ಭಾದ್ಯತೆ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ